Payment of Compensation to Ex-tenants in Coondapur Taluk, D.K.

962. SRI KAPU SANJEEVA SHETTY (Coondapur)—Will the Minister for Revenue be pleased to state :—

(a) the total amount of compensation paid to ex-land lords since the constitution of land tribunal in Coondapur Taluk, Dakshina Kannada District ; the number of beneficiaries ;

(b) the number of landlords who are yet to be paid compensation amount ; the total compensation amount to be paid ;

(c) whether it has come to the notice of Govenment that thousands of landlords who have lost their lands and are experiencing hardship for the last 5-6 years without getting compensation amount ;

(d) if so, measures proposed to be taken by the Government for immediate payment of compensation amount ?

SRI MALLIKARJUNA M. KHARGE (Minister for Revenue)—

(a) 1. Rs. 26,59,271-85

2. 1.148.

(b) 1. 19.998.

2. Rs. 1.77,89,791-00.

(c) No such specific instance has come to the notice in this district.

(d) Necessary measures are being taken to fix the amount of compensation and for its payment.

ಶ್ರೀ ಕಾಪು ಸಂಜೀವ ಶೆಟ್ಟಿ.—ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಸುಮಾರು ೨೧ ಸಾವಿರ ಭೂ ಮಾಲಿಕರು ತಮ್ಮ ಭೂಮಿಯನ್ನು ಕಳೆದುಕೊಂಡಿದ್ದು ಅದರಲ್ಲಿ ಸುಮಾರು ೧೧೪೮ ಭೂ ಮಾಲಿಕರಿಗೆ ಮಾತ್ರ ಪರಿಹಾರ ಧನವನ್ನು ಕೊಡಲಾಗಿದೆಯೆಂದು ತಾವು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ, ಕಳೆದ ೮ ವರ್ಷಗಳಿಂದ ಈ ಭೂ ಮಾಲೀಕರು ತಮ್ಮ ಭೂಮಿಯನ್ನು ಕಳೆದುಕೊಂಡು, ಪರಿಹಾರವನ್ನು ಪಡೆಯದೆ ತೊಂದರೆಗೀದಾಗ್ದಿರೆ. ಮಾನ್ಯ ಮಂತ್ರಿಗಳು ಉಳಿದ ಭೂ ಮಾಲೀಕರಿಗೆ ಯಾವರೀತಿಯಲ್ಲಿ ಪರಿಹಾರ ಧನವನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದು ಕೇವಲ ಕುಂದಾಪುರ ತಾಲ್ಲೂಕಿಗೆ ಸಂಬಂಧಪಟ್ಟ ಪ್ರಶ್ನೆ, ದಕ್ಷಿಣ ಕನ್ನಡ ಜಿಲ್ಲೆಗೆ ಅಲ್ಲ. ಯಾರು ಕಾನೂನು ಪ್ರಕಾರ ಪರಿಹಾರವನ್ನು ಪಡೆಯಲಿಕ್ಕೆ ಅರ್ಹರಿದ್ದಾರೋ ಅವರೆಲ್ಲರಿಗೂ ಪರಿಹಾರವನ್ನು ಕೊಡುತ್ತೇವೆ. ಈಗ ನಾವು ಯಾರು ಯಾರು ಅರ್ಹರಿದ್ದಾರೆಂದು ಹೇಳಿ ತೀರ್ಮಾನ ತೆಗೆದುಕೊಂಡಿದ್ದೇವೆ. ಅವರಲ್ಲಿ ಕೆಲವರಿಗೆ ಬಾಂಡ್ಸ್ ಕೊಡಬೇಕಾಗಿದೆ. ರಿಸರ್ವ್ ಬ್ಯಾಂಕ್‌ನಿಂದ ಈ ಬಾಂಡುಗಳು ಕ್ಲಿಯರ್ ಆಗಿ ಬಂದು ರೆಡಿಯಾಗಿದೆ. ಸ್ವಲ್ಪ ದಿವಸದಲ್ಲಿಯೇ ಭೂಮಾಲೀಕರಿಗೆ ಬಾಂಡುಗಳನ್ನು ಕೊಡುತ್ತೇವೆ. ಮತ್ತೆ ನವಂಗೆ ಹಣದ ಕೊರತೆಯೇನೂ ಇಲ್ಲ. ಈಗಾಗಲೇ ನಿಮ್ಮ ತಾಲ್ಲೂಕಿನಲ್ಲಿ ೧,೭೭,೮೯,೭೯೧ ರೂಪಾಯಿಗಳ ಪರಿಹಾರ ಧನವನ್ನು ಕೊಟ್ಟಿದ್ದೇವೆ. ಉಳಿದಂಥ ಭೂ ಮಾಲೀಕರಿಗೆ ಬಾಂಡ್ ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಕಾನೂನು ಪ್ರಕಾರ ಯಾರಿಗೆ ಕೊಡಬೇಕಾಗಿದೆಯೋ ಅದಕ್ಕೆ ನಮ್ಮಲ್ಲಿ ಬಡ್ಜೆಟ್ ಪ್ರಾವಿಷನ್ ಕೂಡ ಮಾಡಿಕೊಂಡಿದ್ದೇವೆ, ಇದಕ್ಕೆ ಸುಮಾರು ೧೨ ಕೋಟಿ ರೂಪಾಯಿಗಳ ಪ್ರಾವಿಷನ್ ಮಾಡಿಕೊಂಡಿದ್ದೇವೆ. ಯಾರು ಯಾರಿಗೆ

ಪರಿಹಾರ ಧನ ಸಿಕ್ಕಿಲ್ಲವೆಂದು ಹೇಳಿದರೆ ಅವರಿಗೂ ಹಣ ಕೊಡಬಹುದು. ವಿಡೋಸ್, ಮೈನರ್ಸ್ ಮತ್ತು ಸ್ಮಾಲ್ ಫಾರ್ಮರ್ಸ್ ಬಿಟ್ಟು ಉಳಿದಂಥ ಭೂಮಾಲೀಕರಿಗೆ ಬಾಂಡುಗಳ ರೂಪದಲ್ಲಿ ಪರಿಹಾರ ಧನವನ್ನು ಕೊಡುತ್ತೇವೆ ಇನ್ನು ಒಂದೆರಡು ತಿಂಗಳಲ್ಲಿ ಈ ಬಾಂಡುಗಳನು ಇಷ್ಯೂ ಮಾಡುತ್ತೇವೆ. ಇದರ ಮೇಲೆ ಐದೂವರೆ ಪರ್ಸೆಂಟ್ ಬಡ್ಡಿಯನ್ನು ಕೊಡುತ್ತೇವೆ.

ಶ್ರೀ ಕಾಪು ಸಂಜೀವ ಶೆಟ್ಟಿ.—ತಾವು ಸುಮಾರು ೨೦ ಸಾವಿರ ಭೂಮಾಲೀಕರಿಗೆ ಪರಿಹಾರ ಧನವನ್ನು ಕೊಡಬೇಕು. ಇದರಲ್ಲಿ ೮-೧೦ ಸಾವಿರ ಜನ ದೊಡ್ಡ ಭೂಮಾಲೀಕರು ಇರಬಹುದು, ಉಳಿದವರು ಬಹಳ ಬಡವರು, ಸಣ್ಣ ರೈತರು, ಇವರು ಪರಿಹಾರಧನಕ್ಕಾಗಿ ಕಳೆದ ನಾಲ್ಕೈದು ವರ್ಷಗಳಿಂದ ಸಂಕಟಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ತಾವು ಉತ್ತರವಾಗಿ, ಈ ಜಿಲ್ಲೆಯಲ್ಲಿ ಅಂತಹ ಪ್ರಕರಣಗಳು ಯಾವುದು ಸ್ಪಷ್ಟ ಕಂಡುಬರುವುದಿಲ್ಲ ಎಂದು ಹೇಳಿದ್ದೀರಿ. ಪರಿಹಾರಧನವನ್ನು ಕೊಡಲಿಕ್ಕೆ ಸರ್ಕಾರಕ್ಕೆ ಹಣದ ಕೊರತೆಯಿಲ್ಲ ಆದರೆ ಇವತ್ತು ಸರಿಯಾದ ರೀತಿಯಲ್ಲಿ ಇದರ ಕೆಲಸಗಳು ಆಗುತ್ತಿಲ್ಲ. ಲಂಚದ ಹಾವಳಿಯಿಂದ ಯಾವ ಕೆಲಸಗಳೂ ಅಲ್ಲಿ ಸರಿಯಾಗಿ ತೀರ್ಮಾನವಾಗುತ್ತಿಲ್ಲ. ಸಣ್ಣ ರೈತರು ತಮ್ಮ ಭೂಮಿಯನ್ನು ಕಳೆದುಕೊಂಡು ಬಹಳ ಕಷ್ಟದಲ್ಲಿದ್ದಾರೆ, ತಾವು ಸೂಕ್ತ ಆದೇಶ ಕೊಟ್ಟು, ಆದಷ್ಟು ಬೇಗ ಉಳಿದ ಭೂಮಾಲೀಕರಿಗೆ ಪರಿಹಾರ ಧನವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ನಾನು ಈಗಾಗಲೇ ಹೇಳಿದ ಹಾಗೆ, ಕಾನೂನು ಪ್ರಕಾರ ಯಾರು ಯಾರು ಅರ್ಹರಿದ್ದಾರೆ ಅವರೆಲ್ಲರಿಗೂ ಪರಿಹಾರಧನವನ್ನು ಕೊಡುತ್ತೇವೆ. ಹೋದ ಸಲ ಇದಕ್ಕಾಗಿ ಕೊಟ್ಟ ಹಣದಲ್ಲಿ ಸುಮಾರು ನಾಲ್ಕು ಕೋಟಿ ರೂಪಾಯಿಗಳ ಹಣ ಲ್ಯಾಪ್ಸ್ ಆಯಿತು. ನಾವು ಯಾರು ಯಾರಿಗೆ ಬಾಂಡ್ಸ್ ಕೊಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ ಅವರ ಬಗ್ಗೆ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ ? ಈಗಾಗಲೇ ನಾವು ತೀರ್ಪಾದ ಕ್ರಮ ತೆಗೆದುಕೊಂಡು ಜೂನ್ ಕೊನೆಯ ವೇಳೆಗೆ ಟೆನ್ಷಿ ಕೇಸುಗಳನ್ನು ಮುಗಿಸಬೇಕು ಎಂದು ಮಾಡಿದ್ದೇವೆ, ನಮ್ಮ ಜಿಲ್ಲಾಧಿಕಾರಿಗಳು ಸಹ ಈ ಬಗ್ಗೆ ತೀವ್ರಕ್ರಮ ತೆಗೆದುಕೊಂಡಿದ್ದಾರೆ. ಉಳಿದ ಲ್ಯಾಂಡ್ ಲಾರ್ಡ್ಸ್ ಏನು ಇದ್ದಾರೆ ಅವರಿಗೆ ಆದಷ್ಟು ಬೇಗ ಪರಿಹಾರಧನವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ. ರಾಮಭಟ್ಟ —ತಾವು ಹೇಳುತ್ತಿದ್ದೀರಿ, ಯಾರಿಗೆ ಅರ್ಹತೆ ಇದೆ ಅಂಥವರಿಗೆ ಪರಿಹಾರ ಧನವನ್ನು ಕೊಡಲಿಕ್ಕೆ ತೊಂದರೆಯಿಲ್ಲ ಎಂದು, ಆದರೆ ನಮ್ಮ ಜಿಲ್ಲೆಯಲ್ಲಿ ಅರ್ಹತೆ ಇದ್ದು ಹಣದ ಕೊರತೆಯಿಂದ ಕೊಡುವುದಕ್ಕಾಗುತ್ತಿಲ್ಲವೆಂದು ಹೇಳುತ್ತಿದ್ದಾರೆ ಇದಕ್ಕೆ ತಾವು ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಈ ವರ್ಷ ನಾವು ಇದಕ್ಕಾಗಿ ಸುಮಾರು ೧೧ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ನಿಮ್ಮ ಜಿಲ್ಲಾಧಿಕಾರಿಗಳು ಕೇಳಿದಾಗಲೆಲ್ಲ ಎಷ್ಟೆಷ್ಟು ಹಣವನ್ನು ಕೇಳಿದ್ದಾರೋ ಅಷ್ಟಷ್ಟನ್ನು ಕೊಟ್ಟಿದ್ದೇವೆ. ಇನ್ನೂ ಬೇಕು ಎಂದರೆ ಹಣಕೊಡುತ್ತೇವೆ. ೪೪ ಕೇಸುಗಳನ್ನು ಬೇಗನೆ ಮುಗಿಸಬೇಕು ಎನ್ನುವ ದೃಷ್ಟಿಯಿಂದ ಉಳಿದವರಿಗೆ ಕಾಂಪನ್ಸೇಷನ್ ಕೊಡತಕ್ಕದ್ದಾಗಲೀ, ಕಾಂಪನ್ಸೇಷನ್ ಫಿಕ್ಸ್ ಮಾಡತಕ್ಕದ್ದಾಗಲೀ, ಅವಾರ್ಡ್ ಪಾಸ್ ಮಾಡತಕ್ಕದ್ದಾಗಲೀ ಲೇಟ್ ಆಗಿರಬಹುದು. ಆದರೂ ಸಂಬಂಧಪಟ್ಟವರಿಗೆ ತಿಳಿಸಿ ಇನ್ನು ಯಾರಿಗೆ ಪರಿಹಾರಧನವನ್ನು ಕೊಡಬೇಕೋ ಅವರಿಗೆ ತಕ್ಷಣ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕಾಪು ಸಂಜೀವ ಶೆಟ್ಟಿ.—ಈ ೨೦ ಸಾವಿರ ಭೂಮಾಲೀಕರಲ್ಲಿ, ಚಿಕ್ಕ ಭೂಮಾಲೀಕರು ಮಧ್ಯಮ ಭೂಮಾಲೀಕರು ಎಷ್ಟು ಎಷ್ಟು ಇದ್ದಾರೆಂದು ತಾವು ಲೆಕ್ಕವನ್ನೇನಾದರೂ ಇಟ್ಟಿದ್ದೀರಾ ?

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಆ ಲೆಕ್ಕ ಸಧ್ಯ ನನ್ನಲ್ಲಿಲ್ಲ.

T. C. H. Institutions sanctioned to K.G.F.

245. SRI C. M. ARUMUGHAM (K. G. F.)—Will the Minister of State for Primary and Secondary Education be pleased to state :—

(a) the number of T.C.H. Institutions sanctioned at K.G.F. and the authorised strength of each institution ;